The Hon'ble Sri T. MARIAPPA.—That question does not arise.

Sri G. A. ACHARYA.—Have the Government got at least technical experts to say which tractor is good or otherwise?

Mr. SPEAKER.—How does this supplementary arise out of the main question?

Sri H. K. VEERANNA GOWDA (Mandya District-General).—Will the Government state whether it is a fact that these tractors which they have now, are not only defective in their mechanism but also unwieldy and unsuitable for middle-size holdings?

The Hon'ble Sri T. MARIAPPA.—I do not admit that they are defective. These are big tractors no doubt. It may not be very economical to use them on small and scattered plots. That is the reason why we are sending a team of 4 or 5 tractors if all big land-owners could join together and make use of them.

Sri H. K. VEERANNA GOWDA.—Will the Government state whether farmers owning middle-size plots will be allowed to purchase medium size tractors like Fergusson tractors and will the Government give facilities in that direction?

The Hon'ble Sri T. MARIAPPA.—No such scheme is in operation now. I will have it examined.

ಶ್ರೀ ಎಂ. ಎಚ್. ಜೋಯಿಸರು (ಮೈಸೂರು ಜಿಲ್ಲೆ).—ಈ ಟ್ರ್ಯಾಕ್ಟರುಗಳು ಬೇಕೆಂದು ಕೇಳುವವರಿಗೆ ಸರ್ಕಾರದವರು ನೇರವಾಗಿ ಕೊಂಡು ಅವರಿಗೆ ಒದಗಿಸುತ್ತಾರೋ ಅಥವಾ ಅವರೇ ಅದನ್ನು ಕೊಂಡುಕೊಳ್ಳಲು ಹಣವನ್ನು ಸಾಲದ ರೂಪದಲ್ಲಿ ಒದಗಿಸುತ್ತಾರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿರುವುದನ್ನೇ ನಾವು ಕೊಡುತ್ತೇವೆ.

ಶ್ರೀ ಎಂ. ಎಚ್. ಜೋಯಿಸರು.—ನಿಮ್ಮಲ್ಲಿರತಕ್ಕದ್ದು ಎಷ್ಟು ದಿವಸಗಳ ಹಿಂದೆ ಕೊಂಡಿರತಕ್ಕದ್ದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಎಚ್. ಜೋಯಿಸರು.—ನಿಮ್ಮಲ್ಲಿರುವುದು ಬೇಡ, ನಾವು ಬೇರೆ ತೆಗೆದುಕೊಳ್ಳುತ್ತೇವೆಂದು ಕೇಳಿರತಕ್ಕವರಿಗ್ಯಾರಿಗೂ ತಾವು ಈ ಬಗ್ಗೆ ಹಣವನ್ನು ಒದಗಿಸಿಲ್ಲವೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ಮಂಜೂರಾತಿ ದೊರೆತಿದ್ದರೆ ಹಣ ಒದಗಿಸಲಾಗುತ್ತೆ.

ಶ್ರೀ ಎಂ. ಎಚ್. ಜೋಯಿಸರು.—ಈಗ ಯಾರಾದರೂ ಒಬ್ಬರು ನನಗೆ ಈ ಬಗ್ಗೆ ಹಣವನ್ನು ಸಾಲ ಕೊಡಿ ಎಂದು ಕೇಳಿದರೆ, ಅತನಿಗೆ ದ್ರವ್ಯಸಹಾಯವಾಯುತ್ತೀರೋ ಅಥವಾ ನಿಮ್ಮಲ್ಲಿರತಕ್ಕ ಟ್ರ್ಯಾಕ್ಟರುಗಳನ್ನೇ ಅವರಿಗೆ ಗಂಟುಹಾಕುತ್ತೀರೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೀಗೆ ಮಾಡಬೇಕೆಂಬ ಬಗ್ಗೆ ಖಚಿತವಾಗಿ ಎಲ್ಲಿಯೂ ಹೇಳಿಲ್ಲ.

ಶ್ರೀ ಎಂ. ಎಚ್. ಜೋಯಿಸರು.—ಕೇಳತಕ್ಕವರಿಗೆಲ್ಲಾ ಟ್ರ್ಯಾಕ್ಟರುಗಳನ್ನು ಒದಗಿಸಲು ತಾವು ಸಿದ್ಧವಾಗಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಸಿ. ಶಿವಾನಂದ ಶರ್ಮರು (ಬೆಂಗಳೂರು ಜಿಲ್ಲೆ).—ತಾವು ಈಗ ಸಾಲವಾಗಿ ಕೊಡುತ್ತಿರುವ ಹಣ ವೆಲ್ಲಾ ಸದ್ವಿನಿಯೋಗವಾಗುತ್ತಿದೆಯೆಂದು ತಾವು ಪರೀಕ್ಷೆಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಇದಕ್ಕೆ ಉತ್ತರ ಹೇಳಲಾಗಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರು.—ಇದರಿಂದ ಒಂದು ದಿನಕ್ಕೆ ಎಷ್ಟು ಎಕರೆ ಉಳಲಾಗುತ್ತಿದೆ?

Mr. SPEAKER.—That does not arise.

ಶ್ರೀ ನುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಯಾರು ಅರ್ಜಿ ಹಾಕಿಕೊಂಡರೂ ತಾವು ಈ ಟ್ರ್ಯಾಕ್ಟರನ್ನು ಒದಗಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅರ್ಜಿಬರಲಿ, ನಂತರ ಉಳಿದ ವಿಚಾರ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಟ್ರ್ಯಾಕ್ಟರು ಉಳತಕ್ಕ ರೀತಿಯಲ್ಲಲ್ಲದಿದ್ದಲ್ಲ ಅದನ್ನು ಸರಿಪಡಿಸಿ ನಂತರ ಕೊಡುತ್ತೀರೋ ಅಥವಾ ಹಾಗೇ ಅದನ್ನು ಕೊಡುತ್ತೀರೋ?

Mr. SPEAKER.—That does not arise.

System of getting work done on amani or nominal roll basis in the Department of Public Works.

* *Q.*—**58. Sri Kadidal MANJAPPA** (Shimoga District–General).—Will the Government be pleased to state:—

since how long the system of getting work done on *amani* or nominal roll basis is in vogue in the Department of Public Works?

A.—**The Hon'ble Sri T. MARIAPPA** (Home Minister).—The system has been in vogue for a very long time; the actual period is not ascertainable.

ಶ್ರೀ ಕಡಿದಾಳ್ ಮಂಜಪ್ಪನವರು.—ಹೀಗೆ ಅಮಾನಿ ಕೆಲಸಮಾಡಿಸತಕ್ಕ ಪದ್ಧತಿ ಈ ಇಂಜನಿಯರಿಂಗ್ ಇರಾಖೆಯೊಂದರಲ್ಲಿ ಮಾತ್ರವಿದೆಯೋ ಅಥವಾ ಬೇರೆ ಇನ್ನಾವುದಾದರೂ ಇರಾಖೆಗಳಲ್ಲಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ವಿಧವಾದ ಪದ್ಧತಿ ಬೇರೆ ಯಾವ ಇರಾಖೆಯಲ್ಲೂ ಇಲ್ಲವೆಂದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಹೀಗೆ ಅಮಾನಿ ಕೆಲಸ ಮಾಡಿಸುವುದರ ಉದ್ದೇಶವಾದರೂ ಏನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಮಾನಿ ಪದ್ಧತಿಯ ಪ್ರಕಾರವೂ ಕೊಡಲಾಗುತ್ತಿದೆ. ಫೀಸ್ ಸಿಸ್ಟಂ ಪದ್ಧತಿ ಪ್ರಕಾರವೂ ಕೊಡಲಾಗುತ್ತಿದೆ. ಷೆಡ್ಯೂಲ್ ರೇಟ್ ಪ್ರಕಾರ ಟೆಂಡರುಗಳನ್ನು ಕರೆದುಕೊಡತಕ್ಕ ಸಂದರ್ಭಗಳೂ ಇವೆ. ಕ್ರಮವಾಗಿ ಡಕ್‌ಮಾಡಲಾಗುತ್ತಿದೆ. ಕೂಲಿ ಆಳುಗಳು ಸರಿಯಾಗಿ ದೊರೆಯುತ್ತಿಲ್ಲವಾದ್ದರಿಂದ ದೊಡ್ಡ ದೊಡ್ಡ ಕಾಮಗಾರಿಗಳು ನಡೆಯುತ್ತಿರುವ ಕಡೆ ಹೀಗೆ ಮಾಡಲಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಇದಲ್ಲದೆ ಮತ್ತೆ ಯಾವ ಮಾರ್ಗವೂ ಇಲ್ಲವೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲಸವಾಗಬೇಕೆಂಬುದು ನಮ್ಮ ಮುಖ್ಯ ಉದ್ದೇಶ.

ಶ್ರೀ ಕಡಿದಾಳ್ ಮಂಜಪ್ಪನವರು.—ಕಂಟ್ರಾಕ್ಟ್ ಕೊಟ್ಟರೆ ಕೆಲಸ ಬೇಗ ಆಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗುತ್ತೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದಮೇಲೆ ಈ ಬಗ್ಗೆ ತಾವು ಏಕೆ ಟೆಂಡರ್ ಮೂಲಕ ಕೊಡಬಾರದು?

The Hon'ble Sri T. MARIAPPA.—That is a matter which requires examination.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಅಮಾನಿ ನಾಮಿನರ್ ರೋಲನ್ನು ದಾಖಲೆ ಇಡತಕ್ಕವರು ಮತ್ತು ಮಾಡತಕ್ಕವರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗ್ರಾಜುಯೇಟ್ ಸಬ್‌ಓವರ್‌ಸೀಯರುಗಳು ಇದನ್ನು ಬರೆಯುತ್ತಾರೆ. ಎಗ್ಸಿಕ್ಯುಟಿವ್ ಇಂಜನಿಯರ್ ಮತ್ತು ಅಸಿಸ್ಟಂಟ್ ಎಗ್ಸಿಕ್ಯುಟಿವ್ ಇಂಜನಿಯರುಗಳು ಕ್ರಮವಾಗಿ ಚೆಕ್‌ಮಾಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಪ್ರತಿದಿವಸವೂ ಅಲ್ಲಿ ನಡೆಯತಕ್ಕ ಕೆಲಸದ ಮೇಲೆ ನಿಗಾ ಇಡತಕ್ಕವರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಸಿಸ್ಟೆಂಟ್ ಇಂಜನಿಯರ್.

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಾಮಿ, ದಿನ ಒಂದಕ್ಕೆ ಅಲ್ಲಿ 10-15 ಜನರು ಕೆಲಸಮಾಡಿದ್ದರೆ ರೆಕ್ಕದಲ್ಲಿ 20-30 ಜನರ ದಾಖಲೆ ತೋರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈಗ ತಮ್ಮ ಪ್ರತಿವರ್ಷದ ಖರ್ಚುಗಳಲ್ಲಿ ಈ ಅಮಾನಿ ಬಾಬಿಗೆ ಹೆಚ್ಚು ಹಣ ಖರ್ಚಾಗುತ್ತಿದೆಯೋ ಅಥವಾ ಇತರ ಬಾಬಿನಲ್ಲಿ ಹೆಚ್ಚಾಗಿ ಖರ್ಚಾಗುತ್ತಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಸರ್ಕಾರದವರು ಇಷ್ಟು ಪೊತ್ತದ ಕೆಲಸವಾಗಿದ್ದರೆ ಮಾತ್ರ ಅಮಾನಿ ರೀತ್ಯ ಕೆಲಸ ನಡೆಸಬಹುದೆಂಬ ಬಗ್ಗೆ ಒಂದು ನಿಗದಿ ಮಾಡಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಅದು ಆಯಾ ಸನ್ನಿವೇಶದ ಮೇಲೆ ಹೋಗುತ್ತೆ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈಗ ಲಕ್ಕವಳ್ಳಿಯಲ್ಲಿ ನಡೆಯುತ್ತಿರುವ ಕೆಲಸದಲ್ಲಿ ಬಹುಭಾಗ ಈ ಅಮಾನಿ ರೂಪದಲ್ಲೇ ನಡೆಯುತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಬಗ್ಗೆ ಈ ರೀತಿಯ ಒಂದು ನಿರ್ದಿಷ್ಟವಾದ ಕಾರ್ಯಾಚರಣೆ ಇರುವುದು ತಪ್ಪಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗೆ ಮಾಡದಿರುವುದರಿಂದ ಒಂದು ಲಕ್ಷ ರೂಪಾಯಿ ಖರ್ಚಾಗುತ್ತಿರುವ ಕಡೆ 2-3 ಲಕ್ಷ ರೂಪಾಯಿಗಳು ಹೆಚ್ಚಾಗಿ ನಷ್ಟವಾಗುತ್ತಿದೆಯೆಂದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅದನ್ನು ರುಜುವಾತು ಮಾಡಿಕೊಟ್ಟರೆ ಸರಿಪಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಸರಿಪಡಿಸುತ್ತೇವೆ. ತಮ್ಮ ಸಲಹೆಯನ್ನು ಬಹಳ ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿ ತಪ್ಪನ್ನು ತಿದ್ದುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಜನರಿಗೆ ಯಾವ ಕೆಲಸವೂ ಸಿಕ್ಕದೇ ಇರುವಾಗ ಅಮಾನಿಯಿಂದ ಮಾಡಿಸಲು ಕಾರಣವೇನು?

ಅಧ್ಯಕ್ಷರು.—ತಾವೇ ಹೇಳಿದಹಾಗೆ ಸಿಕ್ಕದೇ ಇರುವುದೇ ಕಾರಣ.

ಶ್ರೀ ಎಕ್. ಹುಚ್ಚಮಾಸ್ತಿಗೌಡರು.—ಅಮಾನಿ ಕೆಲಸ ಮಾಡಿಸುವುದು ಟೆಂಡರು ದರವು ಸರಿಯಾಗಿಲ್ಲದಿರುವುದರಿಂದಲೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲ. ಟೆಂಡರ್ ದರಕ್ಕಿಂತ ಶೇಕಡ 50ರಷ್ಟು ಹೆಚ್ಚಾಗಿರುವ ಉದಾಹರಣೆಗಳೂ ಇವೆ. ಸನ್ನಿವೇಶ, ಕೂಲಿಗಳು ಎಷ್ಟು ಮಟ್ಟಿಗೆ ಸಿಕ್ಕುತ್ತಾರೆ, ಆರೋಗ್ಯವಾದ ಜಾಗ ಮುಂತಾದುವುಗಳ ಮೇಲೆಲ್ಲಾ ಅದು ವ್ಯತ್ಯಾಸವಾಗುತ್ತದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು-ನಿಮ್ಮ ಪಂಗಡ).—ಅಮಾನಿ ಕೆಲಸಗಳಿಗೆ ಅಂದಾಜುಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಕೆಲಸಕ್ಕೆ ಕೂಲಿ ಆಳುಗಳ ನಂಖ್ಯೆ ಮತ್ತು ಕೂಲಿ ನಿಗದಿಯಾಗಿರುತ್ತದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಅಮಾನಿ ಕೆಲಸ ಮಾಡಿರುವ ಕಡೆಯಲ್ಲೆಲ್ಲಾ ಅಂದಾಜು ಕಡಮೆಯಾಗಿರುವುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಸಂದರ್ಭಗಳಲ್ಲಿ ಆಗಿದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಎಷ್ಟು ಆ ರೀತಿಯಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಪ್ರಾಜೆಕ್ಟಿನ ಕೆಲಸವೆಲ್ಲವೂ ಅಮಾನಿಯಿಂದ ಆಗುತ್ತಿದೆ. ಅಲ್ಲಿ ದರವು ಅಂದಾಜಿಗಿಂತ ಹೆಚ್ಚಾಗಿ ಎಷ್ಟು ಹೆಚ್ಚಿಗೆ ವೆಚ್ಚವಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಅಮಾನಿ ಕೂಲಿಗಳು ಕಂಟ್ರಾಕ್ಟರ ಕೂಲಿಗಳೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಅಮಾನಿ ಕೆಲಸಗಳಿಗೆ ಇರಾಖೆಯಿಂದ ನೇಮಕಮಾಡಿಕೊಂಡಿರುವ ಕೂಲಿ ಆಳುಗಳಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರನ್ನು ಕೂಲಯವೇರೆ ನಿಷ್ಕರ್ಷೆಮಾಡಿ ಕೊಟ್ಟಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಮಾನಿ ಕೆಲಸಮಾಡುವುದಕ್ಕೇ ಇರಾಖೆಯಲ್ಲಿ ಬೇರೆ ಜನರಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಏಟಂ ಎಂಬುದನ್ನು ತಿಳಿಸಿದರೆ ಹೇಳಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕಂಟ್ರಾಕ್ಟರುಗಳು ಅಳುಗಳನ್ನಿಟ್ಟುಕೊಂಡು ಅಮಾನಿ ಕೆಲಸಮಾಡುವುದು ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ ; ಅಧಕ್ಕೆ ತಪಶೀಲು ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತಪಶೀಲು ತಿಳಿಸಿದರೆ ವಿವರಗಳನ್ನು ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಕೊಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಮಾನಿ ಕೆಲಸಗಳಲ್ಲಿ ನುಸ್ಥು ರಕ್ಕ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ. ನ್ಯೂನತೆಗಳಿದ್ದರೆ ಸರಿಪಡಿಸೋಣ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ನಾಮಿನರ್ ರೋಲ್‌ನಲ್ಲಿ ಕೆಲಸಮಾಡುವವರು ಆಫೀಸರುಗಳ ಮತ್ತು ಓವರ್‌ಸಿಯರ ಮನೆಗಳಲ್ಲಿ ಕೆಲಸ ಮಾಡುತ್ತಿರುವುದೂ ಮತ್ತು ಇದರಿಂದ ಬಹಳ ನಷ್ಟವಾಗಿರುವುದೂ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಹಾಗೆ ಮಾಡಿದ್ದರೆ, ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಾಮಿನರ್ ರೋಲ್‌ನ್ನು ತನಿಖೆಮಾಡುವುದಕ್ಕೆ ಇರಾಖೆಯವರನ್ನಲ್ಲದೆ ಖಾಸಗಿ ಮನುಷ್ಯರನ್ನು ನೇಮಕವಾಡಬೇಕೆಂದು ಹೇಳುವುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಪ್ರಶ್ನೆ ಆಥವಾ ನಿರ್ಣಯದ ಮೂಲಕ ಬಂದಿಲ್ಲ. ಈ ನಥೆಯಲ್ಲಿ ಕೆಲವು ನದನ್ಯರು ಹೇಳಿದ್ದಾರೆ. ಸಾಧಕಬಾಧಕಗಳನ್ನು ಯೋಚನೆಮಾಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ವ್ಯಾಜಿಕ್ಟಿನಲ್ಲಿ ನುಮಾರು ಒಂದು, ಒಂದೂವರೆ ಲಕ್ಷ ರೂಪಾಯಿ ಕೆಲಸ ಅಮಾನಿಯಾಗಿ ನಡೆಯಬೇಕೆಂದಿದೆ. ಅದನ್ನು ಬೇರೆ ಕಡೆಗಳಲ್ಲಿರುವಂತೆ ಪೀಸ್‌ವರ್ಕ್‌ಸಿಸ್ಟಂ ಪ್ರಕಾರ ಮಾಡಲು ಯೋಚನೆಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಚನೆಮಾಡುತ್ತೇವೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಅಮಾನಿ ಕೆಲಸಮಾಡಿಸುವುದರಲ್ಲಿ ಮೋಸವಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಏಟಾರದಲ್ಲೂ ಮೋಸಮಾಡುವುದಕ್ಕೆ ಅವಕಾಶವಿರುತ್ತದೆ. ಆದರೆ ಹಾಗೆಮಾಡಲು ಸಾಧ್ಯವಾಗದೆ ತಕ್ಕಷ್ಟು ಉಸ್ತುವಾರಿ ಇರುತ್ತದೆ.

ಶ್ರೀ ಜಿ. ವೀರಪ್ಪನವರು.—ಸಾಧಾರಣವಾಗಿ ಅಮಾನಿ ಕೆಲಸದಲ್ಲಿ ಲಂಚಕೋರತನವಿದೆಯೆಂದೂ ಮತ್ತು ಇಲ್ಲದೇ ಇರುವವರ ಹೆಸರನ್ನು ರೋಲ್‌ನಲ್ಲಿ ಸೇರಿಸಿ ಮೋಸಮಾಡಿ ಹಣ ತಿನ್ನುತ್ತಾರೆಂದೂ ದೂರುಗಳು ಬರುತ್ತಿರುವುದು ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆಯನ್ನು ತಳ್ಳಿಹಾಕಿದೆ.

Sri M. GOVINDA REDDY (Chitaldrug District—General).—Did the Government consider it necessary to continue this nominal roll system ?

The Hon'ble Sri T. MARIAPPA.—I have already said that the whole system will be again re-examined.

Sri M. GOVINDA REDDY.—Will there be insurmountable difficulty if the Government give up the system ?

The Hon'ble Sri T. MARIAPPA.—It is a question of convenience. In certain places we may not be able to secure even contractors and in that case we have to naturally engage labour and get the work done departmentally. These are all practical difficulties which we want to examine.

Sri M. GOVINDA REDDY.—Is it not true that the Auditors have certified that the nominal roll accounts are not verifiable ?

The Hon'ble Sri T. MARIAPPA.—We are taking every precaution to see that there are checks and counter-checks.

Sri M. GOVINDA REDDY.—May I know whether it is not a fact that in the last audit report it was suggested that the nominal roll system should be discontinued ?

The Hon'ble Sri T. MARIAPPA.—I want notice.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಅಮಾನಿ ಕೆಲಸನಡೆಯುವಕಡೆ ಸಿ.ಐ.ಡಿ. ಗಳನ್ನಿಟ್ಟು ಮತ್ತು ಇರಾಖೆಯವರು ಅನಿರೀಕ್ಷಿತ ಭೇಟಿ ಕೊಟ್ಟು ತನಿಖೆ ನಡೆಸುವುದು ನೂಕ್ತವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿ.ಐ.ಡಿ. ಗಳನ್ನಿಡುವುದು ಕಷ್ಟ, ಅನುಮಾನವಿರುವಕಡೆ ಅನಿರೀಕ್ಷಿತವಾಗಿ ಅಧಿಕಾರಿಗಳು ಹೋಗಿ ತಪ್ಪಿತಸ್ಥರನ್ನು ಶಿಕ್ಷೆಮಾಡಿರುವ ನಿದರ್ಶನಗಳಿವೆ.

Janab MOHAMED VALIULLA (Kolar District—Muslim).—Is the Department of Public Works a temporary Department or permanent Department ?

Mr. SPEAKER.—That does not arise.

Janab MOHAMED VALIULLA.—You have got a roll basis. Is it a nominal roll basis or is it a real basis ?

The Hon'ble Sri T. MARIAPPA.—It is called nominal roll.

ಶ್ರೀ ಎಂ. ಹುಚ್ಚೇಗೌಡರು (ಚಿಕ್ಕಮಗಳೂರು ಜಿಲ್ಲೆ).—ಅಸಿಸ್ಟೆಂಟ್ ಇಂಜಿನಿಯರು ಮತ್ತು ಸಬ್ ಓವರ್‌ಸಿಯರು ಅಮಾನಿ ಕೆಲಸವನ್ನು ತನಿಖೆಮಾಡುತ್ತಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತಿದ್ದಾರೆ.

ಶ್ರೀ ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಚೆಂಡರುಗಳನ್ನು ಕರೆದು ಕೆಲಸಮಾಡಿಸುವುದಕ್ಕಿಂತ ಅಮಾನಿಯಾಗಿ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚು ಅನುಕೂಲವಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಉದಾಹರಣೆ ಕೊಟ್ಟರೆ ಹೇಳಬಹುದು.

ಶ್ರೀ ಸುಬ್ಬರಾಯಶೆಟ್ಟರು.—ಲಕ್ಕವಳ್ಳಿ ಪ್ರಾಜೆಕ್ಟ್ ನಲ್ಲಿ ಈಗ ಅಮಾನಿ ಕೆಲಸವಿದೆ. ಅದನ್ನು ಷೆಡ್ಯೂಲ್ ದರದಮೇಲೆ ಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಜಾರಿಯಲ್ಲರುವ ಷೆಡ್ಯೂಲ್ ದರದ ಮೇಲೆ ಅಮಾನಿಗೆ ಕೊಡುವುದಿಲ್ಲ.

Hardships caused to villagers by Gur Control Order.

*Q. -59. **Sri Kadidal MANJAPPA** (Shimoga District–General).—Will the Government be pleased to state :—

(a) whether the Government of Mysore was consulted by the Government of India before the Sugar Gur Control Order was enacted ;

(b) whether they have made any arangements to sell jaggery in ration depots ;

(c) whether it has come to their notice that villagers are finding it impossible to secure jaggery even for medicinal purposes ;

(d) the selling price of jaggery fixed in accordance with the Control Order ?

*A.—**The Hon'ble Sri T. MARIAPPA** (Home Minister).—(a) No. The order has been passed by virtue of powers vested in the Centre under the Essential Supplies (Temporary Powers) Act.

(b) Jaggery is not handled or distributed on Government account. Whenever stocks are frozen, such stocks are distributed through Co-operative Societies.

(c) There are complaints that jaggery is not readily available.

(d) The maximum selling price of jaggery (Gur) in the State is Rs. 22 per maund (82-2/7 lbs.) or 0-12-9 per viss (3 lbs.)

ಶ್ರೀ ಕಡಿದಾಳ್ ಮಂಜಪ್ಪನವರು.—ಶ್ರೀ ಕೆ. ಎಂ. ಮುನ್ಷಿಯವರು ಬೆಲ್ಲವನ್ನು ಕಳುಹಿಸುವುದಾಗಿ ಹೇಳಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರು ಕೊಡುವ ಜವಾಬ್ದಾರಿಯನ್ನು ಹೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗಾದರೆ ಕಂಟ್ರೋಲ್ ದರಕ್ಕೆ ಬೆಲ್ಲವನ್ನು ಮಾರುವವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ಜನರು.

ಶ್ರೀ ಕಡಿದಾಳ್ ಮಂಜಪ್ಪನವರು.—ಎಲ್ಲಿ ಸಿಕುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದೇಶದಲ್ಲದೆ ; ಅದರಲ್ಲಿ ತೊಂದರೆಯಿಲ್ಲ. ಆದರೆ ಬೆಲೆ ಕಡಿಮೆಯೆಂದು ಸ್ವಲ್ಪ ಅದೃಶ್ಟವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಆರ್ಡರನ್ನು ಜಾಗ್ರತೆಯಾಗಿ ವಾಪಸ್ಸುತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಬರೆಯುವುದಕ್ಕಾಗುವುದಿಲ್ಲ. ಬೆಲ್ಲವನ್ನು ತಯಾರುಮಾಡಲು ಖರ್ಚು ಹೆಚ್ಚಾಗುವುದರಿಂದ ಧಾರಣೆ ಕಡಿಮೆಯಾದರೆ ತೊಂದರೆಯೆಂದೂ, ರೈತರ ಹಿತದೃಷ್ಟಿಯಿಂದ ಸ್ವಲ್ಪ ಬೆಲೆ ಹೆಚ್ಚಿಸಬೇಕೆಂದೂ ಕೇಳಿದಮೇರೆ 21 ರೂಪಾಯಿ ಇದ್ದುದನ್ನು 22 ರೂಪಾಯಿಗೆ ಏರಿಸರಾಗಿದೆ. ಮತ್ತು ಬೆಲ್ಲದ ಆಭಾವವಿರುವ ಕಡೆಗೆ ಅದನ್ನು ಸಾಗಿಸಲು ಹೆಚ್ಚು ಖರ್ಚಾಗುತ್ತದೆಂದು ತಿಳಿಸಿದ್ದರ ಮೇಲೆ ಅದಕ್ಕೆ ಅವಕಾಶ ಕೊಡಬಹುದೆಂದು ಹೇಳಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಆರ್ಡರಿನಿಂದ ಬೆಲ್ಲವೆಲ್ಲಾ ಮಾಯವಾಗಿ ಜನರಿಗೆ ಬಹು ತೊಂದರೆಯಾಗಿದೆಯೆಂದು ದೂರು ಬಂದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಮಾಯವಾಗಿದೆಯೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಸ್ವಲ್ಪ ಭಾಗ ಮಾಯವಾಗಿದೆ ಮತ್ತು ತೊಂದರೆಯಾಗಿದೆ ಎಂಬುದು ಗೊತ್ತು.

ಶ್ರೀ ಕಡಿದಾಳ್ ಮಂಜಪ್ಪನವರು. ಮಣಕ್ಕೆ 50 ರೂಪಾಯಿನಂತೆ ವಾರಾಟವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಅಷ್ಟು ಜಾಸ್ತಿಯಾಗಿಲ್ಲ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ಆರ್ಡರು ಯಾವಾಗ ಜಾರಿಗೆ ಬಂತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಾಯಶಃ ಎರಡು ತಿಂಗಳಾಗಿದೆ.

ಶ್ರೀ ಜಿ. ವೀರಪ್ಪನವರು.—ಆರ್ಡರಾದಮೇಲೆ ಯಾವಾಗ ಜಾರಿಗೆ ಬಂತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆರ್ಡರು ಬಂದ ಮಾರನೆಯ ದಿನದಿಂದಲೇ ಜಾರಿಗೆ ಬಂದಿದೆ. ಅದರ ಮೇಲೆ ನಮ್ಮ ಸರ್ಕಾರಕ್ಕೆ ಅಧಿಕಾರವಿಲ್ಲ. ಆಹಾರ ಸರಬರಾಯಿ ಡೈರೆಕ್ಟರಿಗೆ ಆ ಅಧಿಕಾರ ವಹಿಸಿದೆ. ಎಲ್ಲ ಬೆಲ್ಲವಿದೆಯೆಂದು ತಿಳಿದುಬಂದಿದೆಯೋ ಅಲ್ಲಿ ಅದನ್ನು ತೆಗೆದುಕೊಂಡು ಮಾರಿಸಿದ್ದೇವೆ.

ಶ್ರೀ ಜಿ. ವೀರಪ್ಪನವರು.—ಬೆಲ್ಲವನ್ನು ನೆಲದಲ್ಲಿ ಹೂತಿಟ್ಟಿರುವುದರಿಂದ ಬಹಳ ಜನರಿಗೆ ತೊಂದರೆಯಾಗಿದೆಯೆಂಬುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದೂರುಗಳು ಬಂದಿವೆ. ಎಲ್ಲ ಇದೆಯೆಂದು ನಮಾಚಾರ ಬಂದಿದೆಯೋ ಅಲ್ಲಿಗೆ ಹೋಗಿ ವಶಪಡಿಸಿಕೊಂಡಿದ್ದೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಎರಡು ಮೂರು ಮಣ ಇರುವ ಕಡೆ